(ಆ) ಬೆಂಗಳೂರು ನಗರದಲ್ಲಿ ಖಾಸಗಿ ಹಣಕಾಸು ಸಂಸ್ಥೆಗಳಿಂದ ಮುಗ್ಧ ಠೇವಣಿದಾರರಿಗೆ ವಂಚನೆ

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಅದರಲ್ಲೂ ಬೆಂಗಳೂರು ನಗರದಲ್ಲಿ ಖಾಸಗಿ ಹಣಕಾಸು ಸಂಸ್ಥೆಗಳು ಮುಗ್ಧ ಠೇವಣಿದಾರರನ್ನು ವಂಚಿಸಿರುವ ಬಗ್ಗೆ ಗೃಹ ಮತ್ತು ಪಕ್ಷ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಆರ್. ರೋಷನ ಬೇಗ್ (ಮಾನ್ಯ ಗೃಹ ಮತ್ತು ಪಕ್ಷ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಅದರಲ್ಲಿಯೂ ವಿಶೇಷವಾಗಿ ಬೆಂಗಳೂರು ನಗರದಲ್ಲಿ ಅನೇಕ ಖಾಸಗಿ ಹಣಕಾಸು ಸಂಸ್ಥೆಗಳು ಅವ್ಯವಹಾರ ನಡೆಸಿ, ಜನರಿಗೆ ಮೋಸ ಮಾಡಿರುವ ಕುರಿತು, 1993 ರಿಂದ 91 ಪ್ರಕರಣಗಳನ್ನು ಪೋಲೀಸರು ಪತ್ತೆ ಹಚ್ಚಿ ಖಾಸಗಿ ಚಿಟ್ಸ್ ಮತ್ತು ಹಣ ವ್ಯವಹಾರ ಕಾಯ್ದೆ 1973ರ ಕಲಂ 5 ಹಾಗೂ ಭಾ.ದಂ.ಸಂ. ಕಲಂ 42ರನ್ವಯ ಪ್ರಕರಣವನ್ನು ದಾಖಲಿಸಿ ಕ್ರಮ ಕೈಗೊಳ್ಳಲಾಗಿದೆ. ಇವುಗಳಲ್ಲಿ 17 ಪ್ರಕರಣಗಳು ನ್ಯಾಯಾಲಯದ ವಿಚಾರಣೆಯಲ್ಲಿರುತ್ತವೆ. 2 ಪ್ರಕರಣಗಳಲ್ಲಿ 'ಸಿ' ವರದಿಯನ್ನೂ ಮತ್ತೊಂದು ಪ್ರಕರಣದಲ್ಲಿ 'ಬಿ' ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. 73 ಪ್ರಕರಣಗಳು ಪ್ರಕರಣದಲ್ಲಿ ತನಿಖಾ ಹಂತದಲ್ಲಿರುತ್ತದೆ. ಇವುಗಳಲ್ಲಿ ಒಟ್ಟು ರೂ. 2,95,000 ವಸೂಲಾತಿ ಮಾಡಲಾಗಿದೆ.

ವಿವರ ಈ ಕೆಳಕಂಡಂತಿರುತ್ತವೆ. :-

ವರ್ಷ	ಪತ್ತೆಯಾದ ಪ್ರಕರಣಗಳು	ನ್ಯಾಯಾಲಯ ವಿಚಾರಣೆ	'ಬಿ' ವರದಿ	'ಸಿ' ವರದಿ	ತನಿಖಾ ಹಂತ
1993	5	4	-	1	-
1994	2	2	-	-	-
1995	7	3	1	1	2
1996	77	6	-	-	71

ಬೆಂಗಳೂರು ನಗರದಲ್ಲಿ 1996ರಲ್ಲಿ ಜಿ.ಎನ್.ಎಸ್. ನಿಧಿ ಕಾರ್ಪೋರೇಷನ್, ರಮೇಶ್ ಕಾರ್ ಫೈನಾನ್ಸ್, ಈಶ್ವರಿ ಫೈನಾನ್ಸ್ ಕಾರ್ಪೋರೇಷನ್ ಮತ್ತು ಹೋಂ ಅಸೋಸಿಯೇಟ್ಸ್ ಈ ಹಣಕಾಸು ಸಂಸ್ಥೆಗಳು ಪ್ರಮುಖವಾಗಿ ನಗರದಲ್ಲಿ ಸಾರ್ವಜನಿಕರಿಗೆ ಹೆಚ್ಚಿನ ಬಡ್ಡಿ ನೀಡುವುದಾಗಿ ಭಾರಿ ಪ್ರಮಾಣದ ಹಣವನ್ನು ವಸೂಲಿ ಮಾಡಿದೆ. ಇವುಗಳ ಈಗ ಮುಚ್ಚಲ್ಪಟ್ಟಿದ್ದು, 1996ರಲ್ಲಿ ಈ ಸಂಸ್ಥೆಗಳ ಮೇಲೆ 77 ಪ್ರಕರಣಗಳು ಭಾ.ದಂ.ಸಂ. ಕಲಂ 420 ಹಾಗೂ ಖಾಸಗಿ ಚಿಟ್ಸ್ ಮತ್ತು ಹಣ ವ್ಯವಹಾರ ಕಾಯ್ದೆ 1978ರ ಕಲಂ 4 ಮತ್ತು 5ರ ಅಡಿಯಲ್ಲಿ ಪ್ರಕರಣಗಳನ್ನು ದಾಖಲು ಮಾಡಲಾಗಿದೆ. ಇವುಗಳಲ್ಲಿ 6 ಪ್ರಕರಣದಲ್ಲಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಇನ್ನು 71 ಪ್ರಕರಣಗಳು ತನಿಖಾ ಹಂತದಲ್ಲಿದೆ. ಪೋಲೀಸರು ಇಂತಹ ಹಣಕಾಸಿನ ಸಂಸ್ಥೆಗಳ ಮೇಲೆ ನಿಗಾ

ಇಟ್ಟಿದ್ದು, ಬಾಸಗಿ ಚಿಟ್ಸು ಮತ್ತು ಹಣ ವ್ಯವಹಾರ ಕಾಯ್ದೆ 1978ರ ಮತ್ತು ಭಾ.ದಂ.ಸಂ.ರ ಅಡಿಯಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

+ ಶ್ರೀ ಎಸ್. ಸುರೇಶ್ ಕುಮಾರ್ : ಸನ್ಮಾನ್ಯ ಮಂತ್ರಿಗಳು ಮೂರು ಕಂಪನಿಗಳ ಹೆಸರನ್ನು ಮಾತ್ರ ಹೇಳಿದ್ದಾರೆ. ಕಳೆದ ಆರು ತಿಂಗಳಲ್ಲಿ ಒಂದು ಡಜನಗಿಂತ ಹೆಚ್ಚು ಕಂಪನಿಗಳು ಬಂದಿದ್ದು. ಇವುಗಳನ್ನು ನಮ್ಮ ಬೆಂಗಳೂರಿನಲ್ಲಿ ಬ್ಲೇಡ್ ಕಂಪನಿಗಳು ಎಂದು ಕರೆಯುತ್ತಾರೆ. ಈ ಬ್ಲೇಡ ಕಂಪನಿಗಳು ಬೆಂಗಳೂರಿನ ನಾಗರೀಕರನ್ನು ನುಣ್ಣಗೆ ಬೋಳಿಸುವಂಥ ಒಂದು ಕೆಲಸವನ್ನು ಮಾಡುತ್ತಿವೆ. ಈ ಎಲ್ಲಾ ಸಂಸ್ಥೆಗಳೂ ಕೂಡ ತಮಿಳುನಾಡು ರಾಜ್ಯದ ಚೆನ್ನೈನಲ್ಲಿ ತಮ್ಮ ರಿಜಿಸ್ಟರ್ಡ್ ಕಚೇರಿ ಇಟ್ಟುಕೊಂಡಿವೆ. ನಮ್ಮ ಜನರ ಹಣವನ್ನು ತೆಗೆದುಕೊಂಡು ಹೋಗಿ ಅಲ್ಲಿ ಅವರು ಆಸ್ತಿಯನ್ನು ಸಂಪಾದಿಸಿರುವಂಥದ್ದು ನಮ್ಮ ಪೋಲೀಸರ ಗಮನಕ್ಕೆ ಬಂದಿದೆ. ಈಗ ಚೆನ್ನೈ ಪೋಲೀಸರು ಇಂತಹ ಬ್ಲೇಡ್ ಕಂಪನಿಗಳ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದುಕ್ಕೋಸ್ಕರ ಒಂದು ಸ್ಪೆಶಲ್ ಸೆಲ್ ಮಾಡಿ ಅವರ ಪ್ರಾಪರ್ಟಿಯನ್ನು ಅಟ್ಯಾಚ್‌ಮೆಂಟ್ ಮಾಡುತ್ತಿದ್ದಾರೆ. ಈಗ ತಮಿಳುನಾಡು ಸರ್ಕಾರ ಈ ಬ್ಲೇಡ್ ಕಂಪನಿಗಳ ವಿರುದ್ಧ ಕಾರ್ಯಾಚರಣೆ ಮಾಡುವುದಕ್ಕೆ ಒಂದು ವಿಶೇಷ ನ್ಯಾಯಾಲಯ ಕೂಡ ಸ್ಥಾಪಿಸಿದೆ. ಕೇಂದ್ರ ಸರ್ಕಾರ RBI amendment ordinance 1997 dt: 9.1.97 it was promulgated. It prohibits acceptance of funds, by non-banking financial companies. The ordinance, although ensures safety for further depositors, it does not protect the interests of the depositors who have been duped to deposit their hard earned money. ಇನ್ನು ಮುಂದೆ ಡಿಪಾಸಿಟ್ ಮಾಡುವವರಿಗೆ ನಾವು ರಕ್ಷಣೆ ಕೊಡುತ್ತೇವೆ ಎಂದರೂ ಕೂಡ it does not protect the interest of the depositors who have been duped to deposit their hard earned money. ಈಗ ತಮಿಳುನಾಡು ಸರ್ಕಾರ ಒಂದು ತಮಿಳುನಾಡು, ಪ್ರೊಟೆಕ್ಷನ್ ಆಫ್ ಡಿಪಾಸಿಟ್ಸ್ in Financial Institutions Act, 1997 ಎಂದು ಒಂದು ಹೊಸ ಬಿಲ್ಲನ್ನು ತಮಿಳುನಾಡು ವಿಧಾನ ಸಭೆಯಲ್ಲಿ ಇವೊತ್ತು ಇಂಟ್ರಡ್ಯೂಸ್ ಮಾಡಿದೆ. 30.1.1997ರಿಂದ ಆ ಬಿಲ್ ಪ್ರಕಾರ ತಮಿಳುನಾಡು ಸರ್ಕಾರ Tamil Nadu Government is setting up special courts to try fraudulent persons, companies and awarding punishments up to 10 years rigorous imprisonment and find of Rs. 1 lakh."ಈ ರೀತಿ ಬಹಳ ಕಠಿಣವಾದ ಕ್ರಮಕ್ಕನ್ನು ತಮಿಳುನಾಡು ಸರ್ಕಾರ ತೆಗೆದುಕೊಳ್ಳುತ್ತಿದ್ದೆ. ಅದರ ಜೊತೆಗೆ attachment of funds and assets of the owners and those involved in such fradulent companies.

(3) Several other provisions to protect the interests of the depositors. ಆ ರೀತಿ ಒಂದು ಕಾಂಪ್ರೆಹೆನ್ಸೀವ್ ಬಿಲ್ಲನ್ನು ತಮಿಳುನಾಡು ಸರ್ಕಾರ ತರುತ್ತಿದೆ. ನಾನು ಈ ಹಿಂದೆ ಆ ಎಲ್ಲಾ ಡಿಪಾಸಿಟರ್ಸ್‌ಗಳನ್ನು ಜೊತೆಗೆ ಕರೆದುಕೊಂಡು ತಮ್ಮನ್ನು ಭೇಟಿ ಮಾಡಿದ್ದೆ. ಅದೇ ರೀತಿ ಅವರನ್ನು

ಕರೆದುಕೊಂಡು ಮಾನ್ಯ ಉಪ ಮುಖ್ಯಮಂತ್ರಿಗಳಿಗೂ ಕೂಡ ಭೇಟಿ ಮಾಡಿದ್ದೆ. ಅದೇ ರೀತಿ ಅವರನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇರವಾಗ ನಾನು ಅವರಲ್ಲಿ ವಿನಂತಿಸಿಕೊಳ್ಳುವುದು ಏನೆಂದರೆ ನಮ್ಮ ರಾಜ್ಯದಲ್ಲಿ ಯಾರು ಬೇಕಾದರು ಹೀಗೆ ಬಂದು ಕಂಪನಿಗಳನ್ನು ತೆಗೆಯಬಹುದೇ? ಚಿನ್ನವ ನಾಣ್ಯ ಕೊಡುತ್ತೇವೆ, ಮಾರುತಿ ಕಾರ್ ಕೊಡುತ್ತೇವೆ ಶೇಕಡಾ 26ರಷ್ಟು ಬಡ್ಡಿ ಕೊಡುತ್ತೇವೆ ಎಂದು ಹೇಳಿ ಒಂದು ಆಟ್ರ್ಯಾಕ್ಟಿವ್ ಶೋರೂಮ್ ತರಹ ಕಚೇರಿ ತೆಗೆದು, ಈ ರೀತಿ ಮಾಡುವುದು ಸರಿಯೇ? ಅನೇಕ ಜನ ನಿವೃತ್ತಿ ಹೊಂದಿದವರು ತಮ್ಮ ಇಡೀ ಜೀವನದಲ್ಲಿ ಮಡಿದ ಹಣವನ್ನು ಅಲ್ಲಿ ಹಾಕಿದ್ದಾರೆ, ಮಗಳ ಮದುವೆ ಮಾಡಬೆ, ಮನೆ ಕಟ್ಟಿಕೊಳ್ಳದೆ ತಮ್ಮ ದುಡ್ಡನ್ನು ಅವರಿಗೆ ಕೊಟ್ಟು ಮೋಸ ಹೋಗಿದ್ದಾರೆ.

12.40 ಪಿ.ಎಂ.

ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ದಯವಿಟ್ಟು ಕರ್ನಾಟಕದಲ್ಲೂ ಕೂಡ ಈ ಒಂದು ಕಾಂಪ್ರೆಹೆನ್ಸೀವ್ ಬಿಲನ್ನು ತಂದು ಈ ರೀತಿ ಬ್ಲೇಡ್ ಕಂಪನಿಗಳು ಜನರಿಗೆ ಮೋಸ ಮಾಡುವುದನ್ನು ತಡೆಯಬೇಕು. ಈಗಾಗಲೇ ತಮಿಳುನಾಡು ಸರ್ಕಾರ ಏನು ಸ್ಪೆಷಲ್ ಸೆಲ್ ಮಾಡಿದೆ, ಅದರ ಜೊತಗೆ ನಮ್ಮ ಸರ್ಕಾರ ಮತ್ತೆ ನಮ್ಮ ಪೋಲೀಸ್‌ನವರು ಒಂದು ಸಹಕಾರವನ್ನು ಕೊಟ್ಟು ನಮ್ಮ ಡಿಪಾಸಿಟರ್ಸನ್ನು ರಕ್ಷಣೆ ಮಾಡಬೇಕು. ಆ ಅಸೆಟ್ಸ್ ಏನೇನು ಅಟ್ಯಾಚ್‌ಮೆಂಟ್ ಮಾಡಿಕೊಂಡಿದ್ದಾರೆ, ಸೂಕ್ತ ಪ್ರಮಾಣದಲ್ಲಿ ನಮ್ಮ ಠೇವಣಿದಾರರಿಗೂ ಕೂಡ ಹಣ ಬರುವ ಹಾಗೆ ಮಾಡಬೇಕು. ಬೆಂಗಳೂರಿನ ಪೋಲೀಸ್ ಕಮೀಷನರ್‌ರವರ ಹತ್ತಿರ ನಾವು ಹೋಗಿ ಇದರ ಬಗ್ಗೆ ಪ್ರಸ್ತಾಪ ಮಾಡಿದರೆ, ಅವರು ನೊಂದಿರುವವರಿಗೆ ಪರಿಹಾರವನ್ನು ಕೊಡುವುದನ್ನು ಬಿಟ್ಟು, ನೀವು ನಮ್ಮನ್ನು ಕೇಳಿದುಡ್ಡು ಕೊಟ್ಟಿದ್ದೀರೋ ಎಂದು ಕೇಳುತ್ತಾರೆ. ನಿಮಗೆಲ್ಲಾ ರಕ್ಷಣೆ ಕೊಡುವುದಕ್ಕಾಗುವುದಿಲ್ಲ ವಿಐಪಿ ಗಳಿಗೇ ರಕ್ಷಣೆ ಕೊಡುವ ಸ್ಥಿತಿಯಲ್ಲಿಲ್ಲ. ನಮ್ಮ ಹತ್ತಿರ ಸಿಬ್ಬಂದಿ ಕೊರತೆ ಇದೆ ಎನ್ನುತ್ತಾರೆ. ಪೋಲೀಸರು ಇವರಿಗೆ ರಕ್ಷಣೆ ಕೊಡುವುದು ಬಿಟ್ಟು ಸಾಂತ್ವನ ನುಡಿಯುವುದು ಬಿಟ್ಟು ಈ ರೀತಿ ಗಾಯದ ಮೇಲೆ ಉಪ್ಪು ಹಾಕುವ ಹಾಗೆ ಮಾಡಬಾರದು. ಇವತ್ತು ಯಾರು ಬಹಳ ನೊಂದಿದ್ದಾರೆ, ಇವರ ಕಡೆಗೆ ಗಮನ ಕೊಡುವುದಕ್ಕೆ ಪೋಲೀಸನವರು. ಕ್ರಮ ತೆಗೆದುಕೊಳ್ಳಬೇಕು. ಜೊತೆಗೆ ಸರ್ಕಾರ ಈ ದೃಷ್ಟಿಯಿಂದೇನಾದರೂ ಬಿಲನ್ನು ತರುತ್ತದೆಯೇ ಎನ್ನುವುದರ ಬಗ್ಗೆ ನನಗೆ ಉತ್ತರವನ್ನು ಕೊಡಬೇಕು.

ಶ್ರೀ ಆರ್. ರೋಷನ್ ಬೇಗ್ (ಗೃಹ ಸಚಿವರು) : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರಾದ ಸುರೇಶ್ ಕುಮಾರರವರು ಏನು ಹೇಳಿದರು, ಪೋಲೀಸ್‌ನವರು ಫೈನಾನ್ಸಿಯಲ್ ಕಂಪನಿಗಳಿಗೆ ಪ್ರೊಟೆಕ್ಷನ್ ಕೊಡುತ್ತಿದ್ದಾರೆ ಎಂದು - ಅದು ಸುಳ್ಳು.

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಹೇಳಿದ್ದುದು ಆ ನೊಂದಿರುವ ಜನರಿಗೆ ರಕ್ಷಣೆಯನ್ನು ಕೊಡುವುದನ್ನು ಬಿಟ್ಟು ಅವರಿಗೇ ಬುದ್ಧಿವಾದ ಹೇಳುತ್ತಿದ್ದಾರೆ. ಗಾಯದ ಮೇಲೆ ಉಪ್ಪು ಹಾಕಿದಂತೆ ಆಗಿದೆ ಅವರ ಪರಿಸ್ಥಿತಿ.

ಶ್ರೀ ಆರ್. ರೋಷನ್‌ಬೇಗ್ : ಬೆಂಗಳೂರು ನಗರದಲ್ಲಿ 11 ಫೈನಾನ್ಸ ಕಂಪನಿಗಳ ಮೇಲೆ ಸರ್ಕಾರ ಕ್ರಮವನ್ನು ತೆಗೆದುಕೊಂಡಿದೆ. ಅದರಲ್ಲಿ ಸುಮಾರು All over the State, against about

40 companies. cases have been registered. ಸಿ.ಐ.ಡಿ. ಫ್ರಾಡ್ ಸ್ಕ್ವಾಡ್ಎಂದು ಇದೆ. ಬೆಂಗಳೂರು ಸಿಟಿಯಲ್ಲಿ ಸಿಸಿಬಿ ಎಂದು ಇದೆ. ಇದರ ಜೊತೆಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ಇನ್‌ವೆಸ್ಟಿಗೇಷನ್ ಮಾಡಬೇಕು ಎಂದು ಸರ್ಕಾರದಿಂದ ಆದೇಶವನ್ನು ಮಾಡಿದ್ದೇವೆ. ಡಿಸ್ಟ್ರಿಕ್ಟ್ ಕ್ರೈಮ ಇನ್‌ವೆಸ್ಟಿಗೇಷನ್ ಬ್ಯೂರೋ ಎಂದು ಕೂಡ ಇದೆ. ಇದರ ಜೊತೆಗೆ ಪಬ್ಲಿಕ್ ಕೂಡ ಜನರಿಗೆ ವಾರ್ನ ಮಾಡಬೇಕು. ಇಂಥ ಕಂಪನಿಗಳು ಓಪನ್ ಆಗಿದೆ. ಇಂಥವುಗಳ ಬಗ್ಗೆ ಹುಷಾರಾಗಿರಿ ಎಂದು ಜನರಿಗೆ ಹೇಳಬೇಕು. ಇದರ ಜೊತೆಗೆ ನಾವು ದೂರದರ್ಶನದಿಂದ ಕೆಲವು ಸೀರಿಯಲ್‌ಗಳನ್ನು ಕೂಡ ಮಾಡುತ್ತಿದ್ದೇವೆ. ಈ ರೀತಿ ಮಾಡಿದಾಗ ಜನರಿಗೆ ಜಾಗೃತಿ ಉಂಟಾಗುತ್ತದೆ ಎಂದು ಈ ರೀತಿ ಸೀರಿಯಲ್‌ಗಳನ್ನು ದೂರದರ್ಶನದಿಂದ ರಿಲೀಸ್ ಮಾಡುತ್ತಿದ್ದೇವೆ. ತಮಿಳುನಾಡು ಸರ್ಕಾರದಲ್ಲಿ ಬಿಲ ತಂದಿರುವ ಬಗ್ಗೆ ಮಾನ್ಯ ಸದಸ್ಯರು ಹೇಳಿದರು, ಅಲ್ಲಿಯ ಸರ್ಕಾರದ ಜೊತೆ ಮಾತನಾಡಿ ಸಾಧ್ಯವಾದರೆ ಮುಂದಿನ ಅಧಿವೇಶನದ ವೇಳೆಗೆ ಒಂದು ಅಮೆಂಡ್‌ಮೆಂಟ್ ಮಾಡಬೇಕು ಎಂದು ಮಾಡಿದ್ದೇವೆ. ಜನರಿಗೆ ಸುಮ್ಮನೆ ಮೋಸ ಮಾಡುವುದು, ನಿಮಗೆ ಅಷ್ಟು ಕೊಡುತ್ತೇವೆ, ಇಷ್ಟು ಕೊಡುತ್ತೇವೆ ಎಂದು ಹೇಳಿ ರಾತ್ರೋ ರಾತ್ರಿ ಓಡಿ ಹೋಗುವುದು. ಎಷ್ಟೋ ಜನರು ನಿವೃತ್ತಿ ಹೊಂದಿರುವವರು ಕೂಡ ಹಣವನ್ನು ತೊಡಗಿಸಿರುತ್ತಾರೆ. ಜೆ.ಎನ್.ಎಸ್. ನಿಧಿ ಕಂಪನಿ ಎನ್ನುವವರು ನಾಲ್ಕು ನೂರು ಕೋಟಿ ರೂಪಾಯಿಗಳನ್ನು ಬೆಂಗಳೂರ ನಗರದಲ್ಲಿ ಚಿಟ್ ಮಾಡಿದ್ದಾರೆ ನಗರದಲ್ಲಿ. They have collected from about 1200 persons, deposit to the tune of 400 crores. ಮತ್ತೆ ನಾವು ಅವರ ಬಿಲ್ಡಿಂಗ್ ಎಲ್ಲಾ ಸೀಸ್ ಮಾಡಿ 67 ಲಕ್ಷ ರೂಪಾಯಿಗಳನ್ನು ಠೇವಣಿದಾರರಿಗೆ ಕೊಡಿಸಿದ್ದೇವೆ. ತಮಿಳುನಾಡಿನಲ್ಲಿ ಯಾವ ರೀತಿ ಆಕ್ಟ್ ಬಂದಿದೆ, ಅದನ್ನು ಎಕ್ಸಾಮಿನ್ ಮಾಡಿ ಮುಂದಿನ ಅಧಿವೇಶನದ ವೇಳೆಗೆ ತರುವುದಕ್ಕೆ ಸಾಧ್ಯತೆ ಇದ್ದರೆ, ತರುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ಇವತ್ತೇನು ತಮಿಳು ಬಿಲನ್ನು ತರುತ್ತಿದ್ದಾರೆ, ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ, ಆ ಬಿಲನ್ನು ಇಲ್ಲಿಯೂ ಕೂಡ ತರಬೇಕೆಂದು ಹೇಳುತ್ತೇನೆ. ಅವರು ಬಹಳ ಕ್ಲಿಯರ್ ಆಗಿ ಹೇಳಿದ್ದಾರೆ. "There is mushroom growth of financial establishments under the cover of Reserve Bank of India in the State in the recent past with the sole object of grabbling money which was received as deposits from the public, mostly middle class and poor on the promise of unprecedented high rate of interest and without any obligation to refund the deposits to the investors on maturity. Many of these financial establishments have defaulted to return the deposits on maturity to the public running to crores of Rupees and thereby inviting the public resentment which created law and order problems in the State. Government have therefore decided to enact suitable legislation in the public interest in order to regulate the activities of such financial establishments other than those covered by Reserve

Bank of India 1934. The Bill seeks to give effect to the above decision". ಎಂದು ಬಹಳ ಕ್ಲಿಯರ್ ಆಗಿ ಈ ಬಿಲನ್ನು ಮಾಡಿದ್ದಾರೆ. ನಮ್ಮ ಕರ್ನಾಟಕದಲ್ಲಿಯೂ ಕೂಡ ಈ ರೀತಿಯಲ್ಲಿ ಒಂದು ಬಿಲ್ ಅಗತ್ಯ ಇದೆ. ಯಾವುದೇ ಮೋಸ ಮಾಡುವ ಕಂಪನಿಗಳು ಬೆಂಗಳೂರಿನಲ್ಲಿ ಏನು ಬೇಕಾದರೂ ಮಾಡಬಹುದು ಎನ್ನುವ ಧೈರ್ಯದಲ್ಲಿ ಹಾಡುಹಗಲಿನಲ್ಲಿ ಬಂದು ಇಲ್ಲಿ ದೋಚಿಕೊಂಡು ಹೋಗದೆ ಇರುವ ಹಾಗೆ ನಿಯಂತ್ರಣ ಮಾಡುವುದಕ್ಕೆ ಒಂದು ಬಿಲ್ಲಿನ ಅಗತ್ಯ ಇದೆ. ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೋರುತ್ತೇನೆ. ಅವರು ಈ ಬಿಲನ್ನು ತರುವುದರ ಬಗ್ಗೆ ಸ್ಪೆಸಿಫಿಕಲಿ ಈ ಫೈನಾನ್ಸಿಯಲ್ ಇನ್ಸ್‌ಟಿಟ್ಯೂಷನಗಳ ಬಗ್ಗೆ ತಮ್ಮ ನಿರ್ಧಾರವನ್ನು ಪ್ರಕಟಿಸುತ್ತಾರೆಯೇ?

MR. SPEAKER : Home Minister is looking to some papers. ಗೃಹ ಸಚಿವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಏನು ನಡೆಯುತ್ತದೆ ಎನ್ನುವುದನ್ನು ಕೂಡ ಎಕ್ಸ್‌ಪ್ಲೈನ್ ಮಾಡಿದ್ದಾರೆ. I think they are inclined to do the job. ಅವರ ಇಂಟೆನಷನ್ ಅದೇ ಆಗಿರುವುದರಿಂದ there cannot be any other approach.

ಶ್ರೀ ಎಸ್. ಸುರೇಶ್ ಕುಮಾರ್ : ನಾನು ತಮ್ಮ ಮುಖಾಂತರ ಈ ಬಿಲ್ಲಿನ ಕಾಪಿಯನ್ನು ಸಂಬಂಧಪಟ್ಟ ಸಚಿವರಿಗೆ ಕೊಡುತ್ತೇನೆ.

ಅಧ್ಯಕ್ಷರು : ಕಳುಹಿಸಿಕೊಡಿ. In fact, the House thanks you. It is very important subject that you have raised. I will also persuade the Government to have a glance on it and take the clue from it. ಮಾಡಿಸುವುದಕ್ಕೆ ಹೇಳೋಣ ಕಳುಹಿಸಿಕೊಡಿ.

ಅಧ್ಯಕ್ಷರು : ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಪ್ರಸ್ತಾವನೆಯ ಮೇಲೆ ಭಾಷಣ ಶುರು ಮಾಡಿಸೋಣ. ಮಾನ್ಯ ಚಿಮನಕಟ್ಟಿಯವರು. ಶೂನ್ಯ ವೇಳೆ ಇಲ್ಲ ಎಂದು ಹೇಳಿದ್ದೇನೆ. ಒಂದು ಸ್ಪೇಜ್‌ನಲ್ಲಿ ಸ್ಟಾಪ್ ಮಾಡಿಸಿ, ಆಮೇಲೆ ನಿಯಮ 69, ಬಿಲ್ಸ್ ಎಲ್ಲಾ ತೆಗೆದುಕೊಳ್ಳೋಣ ಟೈಂ ಅಡ್ಜಸ್ಟ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಎರಡು ನಿಮಿಷ ಅಡ್ಜಸ್ಟ್ ಮಾಡಿಕೊಡಿ.

ಅಧ್ಯಕ್ಷರು : ಆಗುವುದಿಲ್ಲ. ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ನಾನು ಟೈಮ್ ಉತ್ಪತ್ತಿ ಮಾಡುವುದಕ್ಕಾಗುವುದಿಲ್ಲ. ಇರುವ ಟೈಮನ್ನು ಬಳಕೆ ಮಾಡಬೇಕಷ್ಟೆ.

ಶ್ರೀ ಅರಗ ಜ್ಞಾನೇಂದ್ರ : ಎರಡು ನಿಮಿಷ.

ಅಧ್ಯಕ್ಷರು : 16 ಜನ ಇದ್ದಾರೆ. ನಾನು ಹೇಗೆ ಅಕಾಮಡೇಟ್ ಮಾಡಬೇಕು ಎಂದು ಹೇಳಿ.

ಒಬ್ಬ ಮಾನ್ಯ ಸದಸ್ಯರು : ನಮಗೆ ಸಿಗುವುದೇ ಇದೊಂದು ಅವಕಾಶ.

MR. SPEAKER : If you are prepared to forego some more time on Governor's Address, I am prepared to concede. Kindly listen to me. I cannot generate time. I have got to only make use of the time that is placed at my disposal agreed upon by the consensus arrived at the Business Advisory

Meeting. We have another eight and half hours of time at my disposal povided all the parties are willing to forego little more time that is meant for sparing on the discussion regarding the Motion of Thanks on Governor's Address.

SRI Y. RAMAKRISHNA : They are anxious.

MR. SPEAKER : Yes. I understand their anxiety. That is why I had been liberal today. But the time was spent otherwise. I cannot say that it was unimportant.

ಶ್ರೀ ಅರಗ ಜ್ಞಾನೇಂದ್ರ : ಯಾರೋ ಮಾಡಿದ್ದಕ್ಕೆ ನಾವು ಶಿಕ್ಷೆಗೆ ಒಳಗಾಗುತ್ತೇವೆ.

ಅಧ್ಯಕ್ಷರು : ಹಾಗಲ್ಲ.

ಶ್ರೀ ಅರಗ ಜ್ಞಾನೇಂದ್ರ : ನಾನಾದರೂ ಹೇಳುವುದು 28ನೇ ತಾರೀಖು ಕೆಪಿಸಿಯವರು ಸ್ಟೈಕ್ ಮಾಡುತ್ತಿದ್ದಾರೆ. ಅದನ್ನು ಹೇಳುವುದಕ್ಕೂ ಅವಕಾಶ ಕೊಡದಿದ್ದರೆ ಈ ರಾಜ್ಯ ಕತ್ತಲು ಆಗುತ್ತೆ. ಅಂಥ ಒಂದು ಸ್ಥಿತಿ ಇದೆ.

ಅಧ್ಯಕ್ಷರು : ನನಗೇನು ಸಮಸ್ಯೆ ಇಲ್ಲ. ಮತ್ತೆ ನೀವು ಗೌರ್ನರ್ಸ್ ಅಡ್ರೆಸ್ ಮೇಲೆ ನೀವು ಕೊಟ್ಟಿರುವ ಲಿಸ್ಟ್ ಏನಿದೆ, ಅದರ ಬಗ್ಗೆ ನಿಮ್ಮ ನಿಮ್ಮ ಮುಖ್ಯ ಸಚೇತಕರು ಕಡಿವಾಣ ಹಾಕಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು : ಸ್ವಲ್ಪ ಡಿಡಕ್ಟ ಮಾಡಿದರೂ ನಡೆಯುತ್ತದೆ.

ಅಧ್ಯಕ್ಷರು : ಅದನ್ನು ನಿಮ್ಮ ಡೆಪ್ಯುಟಿ ಲೀಡರ್‌ರವರು ಹೇಳಲಿ.

ಶ್ರೀ ವೈ. ರಾಮಕೃಷ್ಣ : ನಾವು ಸ್ವಲ್ಪ ಜಾಸ್ತಿ ಹೊತ್ತು ಕುಳಿತುಕೊಂಡು ಮಾಡಬಹುದಲ್ಲ.

MR. SPEAKER : I am prepared to come at 7 'O' clock in the morning. ಪ್ರಾಬ್ಲಮ್ ಏನಾಗುತ್ತದೆ ಎಂದರೆ Kindly excuse me, the Front-Benchers don't want to speak when the Press Reporters are not there and everyone of you want Press. Press Reporters are unwilling to sit after 5. P.M. and major time is taken by you. My anxiety is to co-operate with the young members who have come for the first time. Kindly understand. I am not trying to conceal anything.

ಶ್ರೀ ಟಿ.ಬಿ. ಜಯಚಂದ್ರ : ಕಡಿಮೆ ಮಾಡೋಣ. ಚೀರೊ ಅವರನ್ನು ಅರ್ಧಗಂಟೆಯಲ್ಲಿ ಮುಗಿಸುವಂಥ ಪ್ರಯತ್ನ ಮಾಡಬೇಕು.

ಅಧ್ಯಕ್ಷರು : ನನಗೇನೂ ಸಮಸ್ಯೆ ಇಲ್ಲ. But you should not say, ನಾನು ಹೆಸರು ಕೊಟ್ಟಿದ್ದೇನೆ, ನಾನು ಒಂದು ನಿಮಿಷ ಮಾತನಾಡುತ್ತೇನೆ, ಮುಕ್ಕಾಲು ನಿಮಿಷ ಮಾತನಾಡುತ್ತೇನೆ ಎನ್ನುವ ಸಂತೆ ವ್ಯಾಪಾರ ಬೇಡ. ನಾನು ಮೊದಲೇ ಹೇಳಿಬಿಟ್ಟಿದ್ದೇನೆ.